ಶ್ರೀ ಎಂ.ಎಂ.ನಾಣಯ್ಯ(ಆಬಕಾರಿ ರಾಜ್ಯ ಸಚಿವರು) :-

1) 66 ಡಿಸ್ಟಿಲರಿಗಳು, ಇವುಗಳ ಪೈಕಿ ಎರಡು ಡಿಸ್ಟಿಲರಿಗಳು ಉತ್ಪಾದನೆ ಪ್ರಾರಂಭಿಸಿರುವುದಿಲ್ಲ. 1999-2000ನೇ ಆರ್ಥಿಕ ವರ್ಷದಲ್ಲಿ ಇದರಿಂದ ಬಂದ ಒಟ್ಟು ಆದಾಯ ರೂ. 302.69 ಕೋಟಿಗಳು.

2) ಡಿಸ್ಟಿಲರಿಗಳು ರಾಜ್ಯಾದ್ಯಾಂತ ಹಾಗೂ ಹೊರ ರಾಜ್ಯದಲ್ಲೂ ವಹಿವಾಟು ಮಾಡುತ್ತಿರುವುದರಿಂದ ರಾಜ್ಯಕ್ಕೆ ಆದಾಯ ತರುತ್ತದೆ ವಿನಹ ಯಾವುದೇ ಪಟ್ಟಣಕ್ಕಲ್ಲ.

ಬಂದಿಖಾನೆಗಳ ಕೈದಿಗಳಿಗೆ ನೀಡುವ ಸೌಲಭ್ಯ

2808 (3708) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ):- ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಸುಪ್ರೀಂಕೋರ್ಟ್ ಆದೇಶದ ಪ್ರಕಾರ ಕರ್ನಾಟಕದಲ್ಲಿನ ಜೈಲುಗಳಲ್ಲಿ ಅಗತ್ಯ ಸೌಲಭ್ಯಗಳನ್ನು ನಿರ್ದೇಶಿಸಲು ಸರ್ಕಾರ ನಿರ್ಧರಿಸಿದೆಯೇ?

ಆ) ಕೈದಿಗಳ ಮನೋಪ್ರವೃತ್ತಿ ಮಾರ್ಪಡಿಸಲು ಕೈಗೊಂಡಿರುವ ಕ್ರಮಗಳೇನು?

ಇ) ಕೈದಿ ಮಾರ್ಪಾಟು ಕಮೀಷನ್‌ಗಳು ನೀಡಿರುವ ವರದಿಗಳೆಷ್ಟು? ಎಷ್ಟನ್ನು ಜಾರಿಗೆ ತರಲಾಗಿದೆ?

ಈ) ಮೈಸೂರು ಜೈಲಿಗೆ ಸಂಬಂಧಪಟ್ಟಂತೆ 2 ವರ್ಷಗಳ ವಿವರ ಕೊಡುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಮಾನ್ಯ ಗೃಹ ಸಚಿವರು):-

ಅ) ಹೌದು

ಆ) ಕೈದಿಗಳ ಮನೋ ಪ್ರವೃತ್ತಿ ಮಾರ್ಪಡಿಸಲು ಈ ಕೆಳಕಂಡಂತೆ ಸಾಧಾರಣ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ವೃತ್ತಿ ಶಿಕ್ಷಣ ತರಬೇತಿ
2. ಮಜೂರಿ ಗಳಿಕೆ ಯೋಜನೆ
3. ಆಧುನಿಕ ರೀತಿಯಲ್ಲಿ ಕೃಷಿ ಮತ್ತು ತೋಟಗಾರಿಕೆ ತರಬೇತಿ
4. ಶಿಕ್ಷಣ ಮತ್ತು ವಾಚನಾಲಯ
5. ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆ
6. ಸಂದರ್ಶನ ಪದ್ಧತಿ
7. ಪರೋಲ್ ಮತ್ತು ಫರ್ಲೋ ರಜೆ
8. ಅವಧಿ ಪೂರ್ವ ಬಿಡುಗಡೆ
9. ಸಾಮಾನ್ಯ ಅಭಿವೃದ್ಧಿ ಕಾರ್ಯಕ್ರಮ ವ್ಯವಸ್ಥೆ

ಇ) ಅಖಿಲ ಭಾರತ ಜೈಲು ಸುಧಾರಣಾ ಸಮಿತಿಯನ್ನು ದಿ:25-7-80 ರಲ್ಲಿ ಕೇಂದ್ರ ಸರ್ಕಾರವು ನ್ಯಾಯಮೂರ್ತಿ ಎ.ಎನ್.ಮುಲ್ಲಾ ಅವರ ಅಧ್ಯಕ್ಷತೆಯಲ್ಲಿ ರಚನೆ ಮಾಡಲಾಗಿದ್ದು ಸದರಿ ಕಮಿಟಿಯು 1983ರಲ್ಲಿ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿರುತ್ತದೆ.

ಅಖಿಲ ಭಾರತ ಜೈಲು ಸುಧಾರಣಾ ಸಮಿತಿಯು 658 ಶಿಫಾರಸ್ಸುಗಳನ್ನು ಮಾಡಿದ್ದು, ಅದರಲ್ಲಿ 7 ಶಿಫಾರಸ್ಸಗಳನ್ನು ತಿರಸ್ಕರಿಸಿದ್ದು, ಉಳಿದ 651 ಶಿಫಾರಸ್ಸುಗಳಲ್ಲಿ ಹಲವಾರು ಶಿಫಾರಸ್ಸುಗಳನ್ನು ಈ ಗಾಗಲೇ ಜಾರಿ ಮಾಡಲಾಗಿದೆ. ಕೆಲವು ಶಿಫಾರಸ್ಸುಗಳು ಪರಿಶೀಲನೆಯಲ್ಲಿವೆ.

ಈ) ದಿನಾಂಕ 1-1-98 ರಂದು ಮೈಸೂರು ಕೇಂದ್ರ ಕಾರಾಗೃಹದಲ್ಲಿ 724 ಪುರುಷ ಬಂದಿಗಳೂ ಹಾಗೂ 49 ಮಹಿಳಾ ಬಂದಿಗಳು ಇದ್ದರು. ಅವರಲ್ಲಿ 39 ಪುರುಷ 12 ಮಹಿಳಾ ಟಾಡಾ ಬಂದಿಗಳು ಇದ್ದರು.

ದಿನಾಂಕ 30-9-2000 ರಂದು 900 ಪುರುಷ ಬಂದಿಗಳು 65 ಮಹಿಳಾ ಬಂದಿಗಳು ಇದ್ದರು.

ಮೈಸೂರು ಕೇಂದ್ರ ಕಾರಾಗೃಹದ ಕಾರ್ಖಾನೆಯಿಂದ 1997 -98 ನೇ ಸಾಲಿನಲ್ಲಿ ರೂ. 5,48,913-00 1998-99ನೇ ಸಾಲಿನಲ್ಲಿ 4,21,437-00 ಉತ್ಪಾದನೆಯನ್ನು ಮಾಡಲಾಗಿರುತ್ತದೆ. ಮೈಸೂರು ಕೇಂದ್ರ ಕಾರಾಗೃಹದ ತೋಟದಿಂದ, 1997-98 ನೇ ಸಾಲಿನಲ್ಲಿ ರೂ. 2,86,487 ಹಾಗೂ 1998-99 ರೂ. 2,34,462 ಕೃಷಿ ಉತ್ಪಾದನೆಯನ್ನು ಮಾಡಲಾಗಿದೆ. ರೂಡ್‌ಸೆಟ್(ರೂರಲ್, ಅರ್ಬನ್ ಡೆವಲಪ್‌ಮೆಂಟ್) ಮತ್ತು ಸೆಲ್ಫ್ ಎಂಪ್ಲಾಯ್‌ಮೆಂಟ್ ಇನ್‌ಸ್ಟಿಟ್ಯೂಟ್ ವತಿಯಿಂದ ಬಂದಿಗಳಿಗೆ ವೃತ್ತಿಪರ ತರಬೇತಿಗಳನ್ನು ನೀಡಲಾಗಿರುತ್ತದ. ಸರ್ಕಾರೇತರ ಸಂಘ ಸಂಸ್ಥೆಗಳ ವತಿಯಿಂದ ಬಂದಿಗಳಿಗೆ ವೈದ್ಯಕೀಯ ತಪಾಸಣೆ, ದಂತ ತಪಾಸಣೆ, ಏಡ್ಸ್, ಬಗ್ಗೆ ಜಾಗೃತಿ ಶಿಬಿರಗಳನ್ನು ಜರುಗಿರುತ್ತವೆ. 1997-98ರಲ್ಲಿ ಸಂಸ್ಥೆಯ ಬಂದಿಗಳಿಂದ ರಕ್ತಾಕ್ಷಿಯೆಂಬ ನಾಟಕವನ್ನು ಬೆಂಗಳೂರು ಮತ್ತು ಮೈಸೂರಿನಲ್ಲಿ ಪ್ರದರ್ಶನ ಮಾಡಲಾಯಿತು. 1999ರಲ್ಲಿ ಮಾರನಾಯಕ ಎಂಬ ನಾಟಕವನ್ನು ಸಂಸ್ಥೆಯ ಬಂದಿಗಳಿಂದ ಮಾಡಿಸಿ ಪ್ರದರ್ಶನ ಮಾಡಲಾಯಿತು.

ಸರ್ಕಾರಿ ಸ್ವಾಮ್ಯದ ನಿಗಮ ಮಂಡಳಿಗಳ ಕಾರ್ಯನಿರ್ವಹಣೆ

2809(3711) ಶ್ರೀ ಗುರುಸ್ವಾಮಿ ಎ.ಎಸ್.(ಚಾಮುಂಡೇಶ್ವರಿ):- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದ ಸ್ವಾಮ್ಯದಲ್ಲಿರುವ ನಿಗಮ ಮತ್ತು ಮಂಡಳಿಗಳು ಎಷ್ಟು?

ಆ) ಇವುಗಳ ಮೇಲೆ ಸರ್ಕಾರ ಹಾಕಿರುವ ಬಂಡವಾಳ ಎಷ್ಟು; ಕಾರ್ಪೋರೇಷನ್‌ವಾರು/ ಕಂಪನಿವಾರು ವಿವರಗಳನ್ನು ನೀಡುವುದು;

ಇ) ಇವುಗಳಲ್ಲಿ ಎಷ್ಟು ಲಾಭದಲ್ಲಿವೆ; ಎಷ್ಟು ನಷ್ಟದಲ್ಲಿವೆ; ವಿವರಗಳನ್ನು ನೀಡುವುದು;

ಈ) ಸರ್ಕಾರಿ ಸ್ವಾಮ್ಯದ ನಿಗಮ ಮಂಡಳಿಗಳ ನಷ್ಟ ಭರಿಸಲು ಕೈಗೊಂಡ ಕ್ರಮವೇನು;

ಉ) ಜಾಗತೀಕರಣ , ನಾರೀಕತೆ ಮತ್ತು ಹೈಟೆಕ್ ಯುಗದಲ್ಲಿ ಈ ಸಂಸ್ಥೆಗಳು ಎಷ್ಟರ ಮಟ್ಟಿಗೆ ಉಪಯುಕ್ತವಾಗಿದೆ;